ಸಾಕ್ಷಿಯನ್ನು ದಿನಾಂಕ 16.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 12 ನೇ ಪ್ರತಿವಾದಿ ಪರ ಶ್ರೀ ಕೆ.ಬಿ. ವಕೀಲರಿಂದಃ**

ಈ ದಾವೆ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ದಾವಾ ಐಟಂ ನಂ. 4 ನೇ ಸ್ವತ್ತನ್ನು ದಾವೆ ದಾಖಲುಪಡಿಸುವ ಸಮಯದಲ್ಲಿ ಈ ದಾವೆಯಲ್ಲಿ ಸೇರ್ಪಡಿಸಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಮತ್ತು ಚಿಕ್ಕಮ್ಮ ಈ ದಾವೆಯಲ್ಲಿ ಪ್ರತಿವಾದಿ 6 ಮತ್ತು 7 ಆಗಿರುವ ಸಮಯದಲ್ಲಿ ಯಾವುದೇ ಲಿಖಿತ ಹೇಳಿಕೆ ಸಲ್ಲಿಸಿರಲಿಲ್ಲ ಎಂದರೆ ಸರಿ. ಈ ದಾವೆಯ ಮೂಲ ವಾದಿಯಾದ ಜ್ಯೋತಿ ನನ್ನ ಮಾವನ ಮಗಳಾಗಬೇಕು. ಮೂಲ ವಾದಿ ಈ ದಾವೆಯನ್ನು ಹಿಂಪಡೆದಿದ್ದರು ಎಂದರೆ ಸರಿ. ದಾವಾ ಐಟಂ ನಂ. 4 ನೇ ಸ್ವತ್ತನ್ನು ಪ್ರತಿವಾದಿ 6 ಮತ್ತು 7 ರವರು ವಾದಿಯರಾಗಿ ಬದಲಾವಣೆಯಾದ ನಂತರ ಸೇರ್ಪಡಿಸಲಾಗಿರುತ್ತದೆ ಎಂದರೆ ಸರಿ. ಸು. 30-35 ವರ್ಷಗಳಿಂದ 1 ರಿಂದ 3 ನೇ ಪ್ರತಿವಾದಿಗಳು ಮತ್ತು ಮೃತ ಮಹೇಶ ತಮಗೆ ಭಾಗದಲ್ಲಿ ಬಂದ ಆಸ್ತಿಗಳನ್ನು ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಗಳು ಮತ್ತು ಮೃತ ಮಹೇಶ ರವರ ಹೆಸರುಗಳು ಪ್ರತ್ಯೇಕವಾಗಿ ದಾವಾ ಸ್ವತ್ತುಗಳಲ್ಲಿ ನಮೂದು ಆಗಿರುವ ವಿಷಯ ವಾದಿಯರಿಗೆ ತಿಳಿದಿತ್ತು ಎಂದರೆ ಸರಿಯಲ್ಲ.

ದಿಃ 06.12.2005 ಮತ್ತು ದಿಃ 28.08.2008 ರಂದು ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಆಗಿರುವ ಕ್ರಯ ಪತ್ರಗಳ ಬಗ್ಗೆ ವಾದಿಯರಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಿಪಿ-13 ದಿಃ 06.12.2005 ರ ಕ್ರಯ ಪತ್ರದಲ್ಲಿ ದೊಡ್ಡಸುಬ್ಬಪ್ಪ ನವರು ಮಕ್ಕಳಾದ 1 ರಿಂದ 3 ನೇ ಪ್ರತಿವಾದಿಗಳು ಹಾಗೂ ಮೃತ ಮಹೇಶ ಹಾಗೂ ನಾಗಪ್ಪ ರವರ ಅಪ್ರಾಪ್ತ ಮಕ್ಕಳು, ನಂಜಪ್ಪನ ಅಪ್ರಾಪ್ತ ಮಕ್ಕಳು ಸೇರಿ ದಾವಾ ಐಟಂ ನಂ. 1 ಮತ್ತು 2 ನೇ ಸ್ವತ್ತಿಗೆ ಕ್ರಯ ಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿ.

ನಿಪಿ-14 ದಿಃ 06.12.2005 ರ ಕ್ರಯ ಪತ್ರದಲ್ಲಿ ಲೇಟ್ ಸಣ್ಣಪ್ಪ ನವರ ಮಗಳು, ಚಿನ್ನಮ್ಮ ಅವರ ಮಗ ಶಂಕರಪ್ಪ, ಲೇಟ್ ಸುಬ್ಬಪ್ಪನವರ ಮಕ್ಕಳಾದ ಪ್ರತಿವಾದಿ 1 ರಿಂದ 3 ಹಾಗೂ ಮೃತ ಮಹೇಶ ಹಾಗೂ ಚಿಕ್ಕಸುಬ್ಬಪ್ಪ ನವರ ಮಗ ಬಸವರಾಜಪ್ಪ ಮತ್ತು ಶಂಕರಪ್ಪ ನ ಅಪ್ರಾಪ್ತ ಮಕ್ಕಳಾದ ಕಾತ್ಯಾಯಿನಿ, ಸುಜಾತ ಮತ್ತು ನಾಗಪ್ಪ ರವರ ಅಪ್ರಾಪ್ತ ಮಕ್ಕಳು, ಗಜೇಂದ್ರ ಮತ್ತು ಟಿ.ನಂದಕುಮಾರ್ ರವರು ಸೇರಿ ದಾವಾ ಐಟಂ ನಂ. 4ನೇ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯ ಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿ.

ನಿಪಿ-14 ರಲ್ಲಿ ಸರ್ವೆ ನಂ. 337 ಒಟ್ಟು ವಿಸ್ತೀರ್ಣ 4 ಎಕರೆ 7 ಗುಂಟೆ ಪೈಕಿ 4 ಎಕರೆ 1 1/2 ಗುಂಟೆ (ಚಿನ್ನಮ್ಮನ ಬಾಬ್ತು 1 ಎಕರೆ 20 ಗುಂಟೆ, ನಂಜಪ್ಪ ಮತ್ತು ಬಸವರಾಜಪ್ಪ ರವರ ಬಾಬ್ತು 2 ಎಕರೆ 21 ಗುಂಟೆ ) ಜಮೀನು ಖರೀದಿಗೆ ನೀಡಿರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ಸರಿ.

ನಿಪಿ-14 ರಲ್ಲಿ ಅವರವರಿಗೆ ಬಂದ ಆಸ್ತಿಯನ್ನು ಅವರು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ದಿಃ 13.12.2022 ರಂದು ದಾವಾ ಐಟಂ ನಂ. 4 ನೇ ಸ್ವತ್ತನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿರುತ್ತೇವೆ ಎಂದರೆ ಸರಿ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ವಾದಿ 2 ಮತ್ತು 3 ನೇದ್ದವರು ಎಂದೂ ಸಹ ಋಣಭಾರರಾಹಿತ್ಯ ಪ್ರಮಾಣ ಪತ್ರವನ್ನು ಪಡೆದಿಲ್ಲ ಎಂದರೆ ಸರಿ. ಮೂಲ ವಾದಿ ದಾವೆ ದಾಖಲುಪಡಿಸಿದ ನಂತರ ಪ್ರತಿವಾದಿ 6 ಮತ್ತು 7 ನೇದ್ದವರು ವಾದಿಗಳಾಗಿ ಬದಲಾವಣೆಯಾದ ನಂತರ ದಾವಾ ಸ್ವತ್ತುಗಳ ಜಂಟಿ ಸ್ವಾಧೀನಾನುಭವದಲ್ಲಿ ಇರುತ್ತೇವೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು 1 ರಿಂದ 3 ನೇ ಪ್ರತಿವಾದಿಗಳು ಹಾಗೂ ಮೃತ ಮಹೇಶ ರವರ ಹೆಸರಿನಲ್ಲಿ 1997-98 ನೇ ಸಾಲಿನಲ್ಲಿ ಪ್ರತ್ಯೇಕವಾಗಿ ಖಾತೆಯಾದ ನಂತರ ಅದಕ್ಕೆ ಸಂಬಂಧಿಸಿದಂತೆ ವಾದಿಯರಿಗೆ ತಕರಾರು ಸಲ್ಲಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು 1 ರಿಂದ 3 ನೇ ಪ್ರತಿವಾದಿಗಳು ಹಾಗೂ ಮೃತ ಮಹೇಶ ದಾವಾ ಸ್ವತ್ತುಗಳನ್ನು ಅನುಭವಿಸಿಕೊಳ್ಳಲಿ ಎಂದು ಬಿಟ್ಟಿದ್ದರು ಎಂದು ನುಡಿಯುತ್ತಾರೆ.

ದಾವಾ ಐಟಂ ನಂ. 4 ನೇ ಸ್ವತ್ತಿಗೆ ಸಂಬಂಧಿಸಿದಂತೆ ದಿಃ 23.06.2022 ರಂದು ಪ್ರತಿವಾದಿ 10 ನೇದ್ದವರು ಪ್ರತಿವಾದಿ 12 ನೇದ್ದವರಿಗೆ ಮಾಡಿಕೊಟ್ಟ ಕ್ರಯಪತ್ರಕ್ಕೆ ಮೂಲ ವಾದಿಯಾದ ಜ್ಯೋತಿ ಹಾಗೂ ಅವರ ಸಹೋದರ ಮಣಿಕಂಠ ಸಹ ಸಾಕ್ಷಿದಾರರಾಗಿ ಖರೀದಿ ಪತ್ರಕ್ಕೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ದಾವಾ ಐಟಂ ನಂ, 1, 2 ಮತ್ತು 4 ನೇ ಸ್ವತ್ತುಗಳಿಗೆ ಸಂಬಂಧಿಸಿದಂತೆ ದಿಃ 28.10.2010 ರಂದು ದಾವಾ ಸ್ವತ್ತನ್ನು ವ್ಯವಸಾಯೇತರ ಜಮೀನುಗಳಾಗಿ ಗಣಿಗಾರಿಕೆಗೆ ಪರಿವರ್ತಿಸಿಕೊಂಡು ಗಣಿಗಾರಿಕೆ ನಡೆಸುತ್ತಿದ್ದರು ಸಹ ಅದರ ಬಗ್ಗೆ ಯಾವುದೇ ತಕರಾರನ್ನು ವಾದಿಯರು ಸಲ್ಲಿಸಿರುವುದಿಲ್ಲ ಎಂದರೆ ಸರಿ. ಜುಬ್ಲಿ ಗ್ರಾನೈಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ರವರು ದಾವಾ ಸ್ವತ್ತಿನಲ್ಲಿ ಗ್ರಾನೈಟ್ ನ್ನು ಉತ್ಪಾದನೆ ಮಾಡಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಸುತ್ತಲೂ ಕಾಂಪೌಂಡ್ ಹಾಕಿ ಮುಂದುಗಡೆ ಗೇಟ್ ಬಿಟ್ಟುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಈಗ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ವಾದಿಯರು ದಾವಾ ಸ್ವತ್ತುಗಳನ್ನು ಕೊನೆಯದಾಗಿ ಈಗ್ಗೆ 20 ವರ್ಷಗಳ ಹಿಂದೆ ನೋಡಿರುತ್ತಾರೆ. ದಾವಾ ಸ್ವತ್ತಿನ ಸುತ್ತಲು ಕಾಂಪೌಂಡ್ ಹಾಕಿ ಮುಂದುಗಡೆ ಗೇಟ್ ಹಾಕಿಕೊಂಡು ಕಾಂಪೌಂಡ್ ಮೇಲೆ ನಂದಿನಿ ಸ್ಟೋನ್ ಇಂಪೆಕ್ಸ್ ಎಂದು ಕಾಂಪೌಂಡ್ ಮೇಲೆ ಬೋರ್ಡ್ ಹಾಕಿರುತ್ತಾರೆ ಎಂದರೆ ಸಾಕ್ಷಿಯು ಇತ್ತೀಚೆಗೆ 3-4 ವರ್ಷಗಳ ಹಿಂದೆ ನಾನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ವಾದಿಯರು ಗಣಿಗಾರಿಕೆ ಇಲಾಖೆಗೆ ದಾವಾ ಸ್ವತ್ತಿನಲ್ಲಿ ಗ್ರಾನೈಟ್ ಉತ್ಪಾದನೆ ಮಾಡಿ ಸಾಗಾಣಿಕೆ ಮಾಡುವ ಪರವಾನಿಗೆಯನ್ನು ತಡೆ ಹಿಡಿಯಬೇಕೆಂದು ಯಾವುದೇ ತಕರಾರು ನೀಡಿರುವುದಿಲ್ಲ ಎಂದರೆ ಸರಿ.

2005 ನೇ ಇಸವಿಯಲ್ಲಿ ಕೆ.ಆರ್.ಮಣಿ ಎಂಬುವರು ದಾವಾ ಸ್ವತ್ತುಗಳಿಗೆ ಮಾಲೀಕರಾಗಿದ್ದು, ಅವರ ನಂತರ ಜುಬ್ಲಿ ಗ್ರಾನೈಟ್ ನ ಮಾಲೀಕರಾದ ಎಲ್.ಟಿ.ನಾನ್ವಾಣಿ ರವರು ಮಾಲೀಕರಾಗಿದ್ದು, ನಂತರ ಹೆಚ್.ಎಸ್.ಜೋಶಿ ರವರು ಮಾಲೀಕರಾಗಿ ಅನುಭವಿಸಿಕೊಂಡು ಬಂದಿರುತ್ತಾರೆ ನನಗೆ ಗೊತ್ತಿಲ್ಲ. ಹೆಚ್.ಎಸ್.ಜೋಶಿ ರವರು ದಾವಾ ಐಟಂ ನಂ. 1 ಮತ್ತು 2 ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿ 13 ನೇದ್ದವರಿಗೆ ಕ್ರಯದ ಪತ್ರ ಮಾಡಿಕೊಟ್ಟಿದ್ದು, ಅದೇ ರೀತಿ ದಾವಾ ಐಟಂ ನಂ. 4 ನೇ ಸ್ವತ್ತಿಗೆ ಸಂಬಂಧಿಸಿದಂತೆ 12 ನೇ ಪ್ರತಿವಾದಿಗೆ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2005 ನೇ ಇಸವಿಯಿಂದ ದಾವಾ ಸ್ವತ್ತುಗಳಿಗೆ ಕ್ರಯ ಪತ್ರದ ಪ್ರಕಾರ ಯಾರು ಯಾರು ಮಾಲೀಕರಾಗಿದ್ದರು ಅವರೆಲ್ಲರೂ ದಾವಾ ಸ್ವತ್ತುಗಳನ್ನು ಅನುಭವಿಸಿಕೊಂಡು ಬಂದು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈಗ ಪ್ರತಿವಾದಿ 12 ಮತ್ತು 13 ರವರು ದಾವಾ ಐಟಂ ನಂ. 1, 2 ಮತ್ತು 4 ನೇ ಸ್ವತ್ತುಗಳಲ್ಲಿ ಸ್ವಾಧೀನ ಇರುತ್ತಾರೆ ಎಂದರೆ ಸರಿ. ದಾವಾ ಸ್ವತ್ತುಗಳ ಬೆಲೆ ಇತ್ತೀಚೆಗೆ ತುಂಬಾ ಜಾಸ್ತಿಯಾಗಿರುತ್ತದೆ ಎಂದರೆ ಸರಿ. ಪ್ರತಿವಾದಿ 12 ಮತ್ತು 13 ನೇದ್ದವರಿಗೆ ತೊಂದರೆ ನೀಡಿ ಅವರಿಂದ ಹಣವನ್ನು ಪಡೆಯಬೇಕೆಂಬ ದುರುದ್ದೇಶದಿಂದ ಈ ದಾವೆಯನ್ನು ದಾಖಲುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಗಣಿಗಾರಿಕೆ ನಡೆಯುತ್ತಿದೆ ಎಂಬ ಬಗ್ಗೆ ನಮಗೆ ಗೊತ್ತಿರುತ್ತದೆ ಎಂದರೆ ಸಾಕ್ಷಿಯು ದಾವೆ ದಾಖಲುಪಡಿಸಿದ ನಂತರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನಮಗೆ 2010 ನೇ ಇಸವಿಯಿಂದ ದಾವಾ ಸ್ವತ್ತುಗಳಲ್ಲಿ ಗಣಿಗಾರಿಕೆ ನಡೆದಿರುವ ವಿಷಯ ನಮಗೆ ಗೊತ್ತಿದ್ದರೂ ಸಹ ಇತ್ತೀಚೆಗೆ ಗೊತ್ತಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 06.12.2005 ರಿಂದ ಇಲ್ಲಿಯವರೆಗೂ ಆಗಿರುವ ಎಲ್ಲಾ ಕ್ರಯಪತ್ರಗಳ ಬಗ್ಗೆ ನಮಗ ಮಾಹಿತಿ ಇದ್ದರೂ ಸಹ ಯಾವುದೇ ಮಾಹಿತಿ ಇರಲಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 1, 2 ಮತ್ತು 4 ನೇ ಸ್ವತ್ತುಗಳು ವ್ಯವಸಾಯೇತರ ಜಮೀನುಗಳಾಗಿದ್ದು ಅವುಗಳ ಬಗ್ಗೆ ವಾದ ಪತ್ರದಲ್ಲಿ ಯಾವುದೇ ತಿದ್ದುಪಡಿ ಮಾಡಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳು ವ್ಯವಸಾಯೇತರ ಜಮೀನುಗಳು ಆಗಿರುವುದರಿಂದ ಅದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ಶುಲ್ಕವನ್ನು ನೀಡಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯರು ಎಂದೂ ಸಹ ಜಂಟಿ ಮಾಲೀಕತ್ವ ಮತ್ತು ಜಂಟಿ ಸ್ವಾಧೀನದಲ್ಲಿ ಇದ್ದಿರಲಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಸು. 40 ವರ್ಷಗಳ ಹಿಂದೆ ಮದುವೆಯಾಗಿದ್ದರಿಂದ ಮತ್ತು ಅವರ ಗಂಡಂದಿರ ಮನೆಗಳಲ್ಲಿ ವಾಸವಿದ್ದುದರಿಂದ ಪ್ರತಿವಾದಿ 1 ರಿಂದ 3 ಮತ್ತು ಮೃತ ಮಹೇಶ್ ಸು. 30-35 ವರ್ಷಗಳಿಂದ ಪ್ರತ್ತೇಕವಾಗಿ ದಾವಾ ಸ್ವತ್ತುಗಳ ಸ್ವಾಧೀನಾನುಭವ ಹೊಂದಿ ಅನುಭವಿಸುತ್ತಾ ಬಂದಿರುವುದರಿಂದ ದಾವಾ ಸ್ವತ್ತುಗಳಲ್ಲಿ ವಾದಿಯರಿಗೆ ಯಾವುದೇ ಹಿಸ್ಸೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಆದ ಕ್ರಯಪತ್ರಗಳು ವಾದಿಯರಿಗೆ ಬಂಧನಕಾರಿಯಾಗಿರುವುದಿಲ್ಲ ಎಂದು ವಾದ ಪತ್ರದಲ್ಲಿ ತಿದ್ದುಪಡಿ ಮಾಡಲು ಆಗಿರುವ ಆದೇಶಕ್ಕೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ತಡೆಯಾಜ್ಞೆ

ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿಯರಿಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಿಸ್ಸೆ ಹಕ್ಕು ಇರದೇಇದ್ದರೂ ಸಹ ಪ್ರತಿವಾದಿ 12 ಮತ್ತು 13 ನೇದ್ದವರಿಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ಈ ದಾವೆಯನ್ನು ದಾಖಲುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಈಗ ವಾದಿಯರ ಪರವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ವಾದಿಯರಿಗೆ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿ ಇದ್ದು, ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಪ್ರತಿವಾದಿ 10 ಮತ್ತು 13 ನೇದ್ದವರು ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಮರು ವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್
ಗುಂಡ್ಲುಪೇಟೆ